namely Amani Chillapalli in the normal year when rainfall is good.

Sri H. C. LINGA REDDY.—Will the restoration work be taken up immediately?

Sri T. MARIAPPA.—In fact I have asked the Department to review the whole position. This comes under the agreement with the Madras Government. Without their permission we cannot take up the work of restoration.

Sri H. C. LINGA REDDY.—Is it true that the Madras Government have given their consent?

Sri T. MARIAPPA.—We have not heard from them of late. For preliminary survey consent has been obtained. But subsequently, because it was prohibitive, it was abandoned. We must pursue the matter over again.

ಶ್ರೀ ಜಿ. ನಾರಾಯಣಗೌಡರು (ಕೋಲಾರ ಜಿಲ್ಲೆ).—ಕೆರೆ ಅಚ್ಚುಕಟ್ಟಿನಲ್ಲಿ ಎಷ್ಟು ಎಕರೆಯಲ್ಲಿ ತರಿ ಬೆಳೆ ತೆಗೆಯುತ್ತಿದ್ದರು?

ಶ್ರೀ ಟಿ. ಮರಿಯಪ್ಪನರು.—ಆ ನವಾಬರ ಇಲ್ಲ. 68 ಎಕರೆಗೆ ಕೆರೆ ಅಂಗಳವನ್ನು ಕೊಟ್ಟು ಅದು ತರಿ ಆಗಿದೆ.

ಶ್ರೀ ಜಿ. ನಾರಾಯಣಗೌಡರು.—ಈಗ ಅಲ್ಲಿ ಎಷ್ಟು ಬೆಳೆಯುತ್ತಿದ್ದಾರೆ?

Sri. T. MARIAPPA.—It depends on rainfall.

ಶ್ರೀ ಜಿ. ನಾರಾಯಣಗೌಡರು.—ಹಾಗಾದರೆ ತರಿ ಕಂದಾಯ ವಸೂಲುಮಾಡುವುದು ನ್ಯಾಯವೆ?

ಶ್ರೀ ಟಿ. ಮರಿಯಪ್ಪನವರು.—ಬೆಳೆಯಾದರೆ ತರಿ ಕಂದಾಯವಸೂಲು ಮಾಡುತ್ತಾರೆ. ಇಲ್ಲದ್ದಿದರೆ ರಿಮಿಷ್ಷನ್ ಇದ್ದೇ ಇದೆ.

ಶ್ರೀ ಜಿ. ನಾರಾಯಣಗೌಡರು.—ಮದ್ರಾಸು ಸರ್ಕಾರದೊಡನೆ ಎಷ್ಟು ವರ್ಷದಿಂದ ವ್ಯವಹಾರ ನಡೆಸುತ್ತಿದ್ದೀರಿ?

ಶ್ರೀ ಟಿ. ಮರಿಯಪ್ಪನವರು.—ಸುಮಾರು 4-5 ವರ್ಷದಿಂದ.

ಶ್ರೀ ಜಿ. ನಾರಾಯಣಗೌಡರು.—ಮದ್ರಾಸು ಸರ್ಕಾರದೊಂದಿಗೆ ಒಂದು ಒಪ್ಪಂದವಾಗಿದ್ದರೂ ಕೂಡ ಆ ಕರಾರಿನ ಪ್ರಕಾರ ಅವರು ನಡೆದುಕೊಳ್ಳದೆ ಅವರ ಪ್ರದೇಶದಲ್ಲಿ ಒಂದು ಅಣೆಕಟ್ಟು ಕಟ್ಟುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಮರಿಯಪ್ಪನವರು.—ಬಂದಿದೆ; ಪ್ರಾಜೆಕ್ಟ್ ಮಾಡಿದ್ದಾರೆ.

ಶ್ರೀ ಜಿ. ನಾರಾಯಣಗೌಡರು.—ಹಾಗೆ ಅವರು ಕಟ್ಟಿಕೊಳ್ಳುವಾಗ ತಾವೇಕೆ ಕಟ್ಟಬಾರದು?

Sri T. MARIAPPA.—It is a matter at Government level between the two Governments.

ಶ್ರೀ ಜಿ. ನಾರಾಯಣಗೌಡರು.—ಈ ನಾಲ್ಕೈದು ಕಳ್ಳಿಯವರಿಗೆ ಈ ಕೆರೆ ಅನುಕೂಲವಾಗಿರುವಾಗ ಎಷ್ಟು ಬೇಗ ನಿಗಾಕೊಡುತ್ತೀರಾ?

ಶ್ರೀ ಟಿ. ಮರಿಯಪ್ಪನವರು.—ಅದು ಅನುಕೂಲವಾದರೆ ಒಪ್ಪಿಕೊಳ್ಳಬಹುದು. ಆದರೆ ಜೀರ್ಣೋದ್ಧಾರಕ್ಕಾಗಿ ಅಂದಾಜು ಮಾಡಿದಾಗ ಅದು 1½ಲಕ್ಷಕ್ಕೆ ಬಂತು. ಬಹುಶಃ ತಿದ್ದುಪಡಿ ಅಂದಾಜು ಆಗಬಹುದಾಗಿತ್ತು. ಆದರೆ ಅದು 'ಪ್ರಾಹಿಬಿಟಿವ್' ಎಂದು ಅಲ್ಲಗೇ ಕೈಬಿಟ್ಟಿದೆ. ಅಲ್ಲದೆ ಪಾರಾರ್ ಒಂದೇ ಸರ್ಕಾರಕ್ಕೆ ಸೇರಿದೆ. 1929ರಲ್ಲಿ "It has too far gone into ruins and therefore cannot be recommended" ಎಂದು ಒಬ್ಬ ಎಗ್ಸಿಕ್ಯುಟಿವ್ ಇಂಜನಿಯರು ಬರೆದಿದ್ದಾರೆ. Therefore the matter has to be investigated in thorough detail to get the maximum benefit for the money that we spend.

ಶ್ರೀ ಜಿ. ನಾರಾಯಣಗೌಡರ [illegible]ಒಂದು ವೇಳೆ ಈ ಅಂದಾಜು ಬಹಳ ಹೆಚ್ಚಾಗುವುದರಿಂದ ತಮಗೆ ಸಾಧ್ಯವಿಲ್ಲದಿದ್ದರೆ ಅಲ್ಲಯವರೇ ಕಟ್ಟಿಕೊಳ್ಳುವುದಕ್ಕೆ ಅವಕಾಶ ಕೊಡುತ್ತೀರಾ?

Sri T. MARIAPPA.—That matter will certainly be examined.

Mr. SPEAKER.—Next question.

Agricultural Colonies for Depressed Classes.

*Q.—66. **Sri M. MADIAH** (Mysore District—Depressed Class).—

Will the Government be pleased to state:—

(a) whether there are any special measures undertaken by the Government for the starting of agricultural colonies and for the settlement of landless members belonging to the Depressed Classes in agricultural avocations in the State;

(b) if the answer to (a) *supra* is in the affirmative;

(i) the names of the places selected in each district;
(ii) the extent of land available in each place;
(iii) the special funds earmarked for the purpose;
(iv) the other facilities created by the Government for the colonists;
(v) the number of families settled in each place, if any;
(vi) the number of families or persons who are prepared to go and settle in the selected agricultural colonies;
(vii) the agency or agencies, if any, entrusted with the supervision of these colonies?

A.—**Sri T. MARIAPPA** (Home Minister).—

(a) No separate agricultural colonies for members belonging to the Depressed Classes have been started. Recently Government have sanctioned the starting of Co-operative farming colonies.

These colonies though not meant exclusively for Harijans may bring Harijans within the operation of the scheme.

(b) In view of the reply to clause (a), this question does not arise.

ಶ್ರೀ ಎಂ. ಮಾದಯ್ಯನವರು.—ನಿಮ್ಮ ವರ್ಗದವರಿಗೆ ಕೆಲವು ಕಾಲೊನಿಗಳನ್ನು, ಅಂದರೆ ಅಗ್ರಿಕಲ್ಚರಲ್ ಕಾಲೊನಿಗಳನ್ನು ತೆರೆಯಬೇಕೆಂಬ ಯೋಚನೆಯು ಬಹು ದಿವಸದಿಂದ ಇದೆಯಲ್ಲವೆ?

*ಶ್ರೀ ಟಿ. ಮರಿಯಪ್ಪನವರು.—ಇಲ್ಲವಲ್ಲ. ಎಲ್ಲಿ ಜಮೀನಿದೆಯೋ ಅಲ್ಲಿ ಕೊಡಬೇಕೆಂದಿದೆ; ತಾವು ಕೇಳುವ ಪ್ರಶ್ನೆಪ್ರಕಾರ ಕಾಲೊನಿಯನ್ನು ಮಾಡಬೇಕೆಂಬ ಯೋಜನೆಯನ್ನು ಸರ್ಕಾರದವರು ಮಂಜೂರು ಮಾಡಿಲ್ಲ.

ಶ್ರೀ ಎಂ. ಮಾದಯ್ಯನವರು.—ಸರ್ಕಾರದವರು ಪರಿಶೀಲನೆ ಮಾಡಿಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಮಾಡಿದ್ದಾರೆ; ಕೋ-ಆಪರೇಟಿವ್ ಫಾರ್ಮಿಂಗ್ ಮಾಡಬೇಕೆಂದಿದೆ; ಅದನ್ನು ಮಾಡುತ್ತೇವೆ.

ಶ್ರೀ ಎಂ. ಮಾದಯ್ಯನವರು.—ಕೋ-ಆಪರೇಟಿವ್ ಫಾರ್ಮಿಂಗ್ ವಿಚಾರ ಕೇಳುತ್ತಿಲ್ಲ. ಹಿಂದಿದ್ದ ಪ್ರಪೋಸಲ್ ಏಕೆ ಬಿಟ್ಟಿರಿ?

ಶ್ರೀ ಟಿ. ಮರಿಯಪ್ಪನವರು.—ತಾವು ಅವೆರಡಕ್ಕೂ ಡಿಸ್ಟಿಂಕ್ಷ್ ಮಾಡಬೇಕು. ಈಗ ತಾವು ಕೋ-ಆಪರೇಟಿವ್ ಕಾಲೊನಿ ಮಾಡಬೇಕೆಂದು ಕೇಳುತ್ತೀರೋ ಅಥವಾ ಹರಿಜನರಿಗೆ ಜಮೀನು ಕೊಡಬೇಕೆಂದು ಹೇಳುತ್ತೀರೊ?

ಶ್ರೀ ಎಂ. ಮಾದಯ್ಯನವರು.—ಸರ್ಕಾರದವರು ಒಂದು ಗೊತ್ತಾದ ಕಡೆ ಜಮೀನು ತೆಗೆದುಕೊಂಡು ಅಲ್ಲಿ ಸೆಟ್ಲ್ ಮಾಡಿ ಕಾಲೊನಿಯನ್ನು ಕೊಡಬೇಕೆಂಬುದನ್ನು ಕೇಳುತ್ತಿದ್ದೇನೆ.

Sri T. MARIAPPA.—Is it purely for Harijans?

Sri M. MADIAH.—There was a proposal.

ಶ್ರೀ ಟಿ. ಮರಿಯಪ್ಪನವರು.—ಬ್ಯೆರಾಪಟ್ಟಣ, ಕೊಟ್ಟಿಗೆರೆ—ಈ ಎರಡು ಕಡೆಗಳಲ್ಲಿ ಜಮೀನು ಕೊಡಬೇಕೆಂದಿದೆ.

ಶ್ರೀ ಎಂ. ಮಾದಯ್ಯನವರು.—ಮೈಸೂರು ಜಿಲ್ಲೆಯಲ್ಲಿ ಹೆಗ್ಗಡದೇವನಕೋಟೆಯಲ್ಲಿ ಒಂದು ಜಾಗವನ್ನು ಚುನಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಂಸ್ಥೆಗಳ ಸಚಿವರು).—ಕಾಲೊನಿ ಆಗಿಲ್ಲ.

ಶ್ರೀ ಎಂ. ಮಾದಯ್ಯನವರು.—ಯಾವ ಸ್ಟೇಜ್ ಲ್ಲಿದೆ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೋಟೀಸ್.

ಶ್ರೀ ಎಂ. ಮಾದಯ್ಯನವರು.—ತಾವು ಕಮಿಷನರಿಗೆ ಪ್ರಪೋಸಲ್ ಕಳುಹಿಸಬೇಕೆಂದು ಸೂಚನೆ ಕೊಟ್ಟಿದ್ದಿರಾ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈ ವಿಚಾರದಲ್ಲಿ ಕಮಿಷನರ ಅಭಿಪ್ರಾಯ ಕೇಳಬಹುದು. ಹೆಗ್ಗಡದೇವನಕೋಟೆ ಕಾಲೊನಿ ವಿಚಾರದಲ್ಲಿ ಕೇಳಿಲ್ಲ. ಪ್ರಪೋಸಲ್ ಇದ್ದರೆ ಸರ್ಕಾರದವರು ಯೋಚನೆ ಮಾಡುತ್ತಾರೆ.

ಶ್ರೀ ಎಂ. ಮಾದಯ್ಯನವರು.—ಇಡೀ ಸಂಸ್ಥಾನದಲ್ಲಿ ಒಂದು ಸರಿಯಾದ ಜಾಗವನ್ನು ಚುನಾಯಿಸಿ ಕಾಲೊನಿ ಮಾಡಬೇಕೆಂದು ನಿಮ್ಮ ವರ್ಗದ ಕಮಿಷನರು ಸೂಚನೆ ಮಾಡಿಲ್ಲವೆ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಎಲ್ಲಿ ಸಾಧ್ಯವೋ ಅಲ್ಲಿ ಸಾಕಾದಷ್ಟು ಜಮೀನು ಸಿಕ್ಕಿದರೆ ಅನುಕೂಲವಾದ ಸ್ಥಳವನ್ನು ಚುನಾಯಿಸಿ ಮಾಡಬೇಕೆಂದು ಸಾಮಾನ್ಯವಾಗಿ ತಿಳಿವಳಿಕೆ ಕೊಟ್ಟಿದೆ. ಅದರ ಪ್ರಕಾರ ಎಲ್ಲಿ ಸಾಧ್ಯವಿದೆಯೆಂಬುದನ್ನು ಯೋಚನೆ ಮಾಡುತ್ತಾರೆ.

ಶ್ರೀ ಎಂ. ಮಾದಯ್ಯನವರು.—ಹಾಗಾದರೆ ಪ್ರಪೋಸಲ್ ಕಳುಹಿಸಿದ್ದಾರೆಯೇ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇದುವರೆಗಿಲ್ಲ. ಪ್ರಪೋಸಲ್ ಬಂದ ಮೇಲೆ ಮಂಜೂರು ಮಾಡುತ್ತೇವೆ.

ಶ್ರೀ ಎಂ. ಮಾದಯ್ಯನವರು.—ಕೋ-ಆಪರೇಟಿವ್ ಫಾರ್ಮಿಂಗ್ ಕಾಲೋನಿ ಮಾಡುವಾಗ ಹರಿಜನರಿಗೂ ಅವಕಾಶ ಮಾಡುತ್ತೀರಾ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದು ಜನರಲ್ ಆಗಿ ಎಲ್ಲರಿಗೂ ಅನ್ವಯಿಸುತ್ತದೆ. ನಿಮ್ಮ ವರ್ಗದವರ ವಿಚಾರವನ್ನೂ ಗಣನೆಗೆ ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ಮಾದಯ್ಯನವರು.—ಜಾಗ್ರತೆ ಪ್ರಪೋಸಲ್ ಕಳುಹಿಸುವಂತೆ ಮಾಡುತ್ತೀರಾ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮಾಡುತ್ತಿದೆ. ಆದಷ್ಟು ಬೇಗ ಮಾಡಬೇಕೆಂದು ಹೇಳಿದೆ.

ಶ್ರೀ ಎಂ. ಮಾದಯ್ಯನವರು.—ಕೋ-ಆಪರೇಟಿವ್ ಫಾರ್ಮಿಂಗ್ ಇದೆಯೆಂದು ಉತ್ತರದಲ್ಲಿ ಹೇಳಿದ್ದೀರಿ. ಅದರ ಸೌಲಭ್ಯವೇನಿದೆ?

ಶ್ರೀ ಟಿ. ಮರಿಯಪ್ಪನವರು.—ನೀರಿನ ಅನುಕೂಲತೆ, ಸ್ಯೆಟುಗಳ ಅನುಕೂಲತೆ ನೋಡಿ ಜಮೀನು ಮಾಡಿಕೊಡುತ್ತೇವೆ. ತಾವು ಮನೆಕಟ್ಟಿ ಅಲ್ಲೇ ನಿಂತು ಜಮೀನಿನಲ್ಲಿ ಬೆಳೆಮಾಡಬೇಕು.

ಶ್ರೀ ಎಂ. ಮಾದಯ್ಯನವರು.—ಕಾಲೋನಿ ಮಾಡಿ ಸ್ಥಳ ಕೊಟ್ಟ ಮಾತ್ರಕ್ಕೇ ಮನೆಕಟ್ಟಿಕೊಳ್ಳಲು ಸಾಧ್ಯವೆ? ಬೇರೆ ಸಹಾಯವಿಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಫಾರೆಸ್ಟಿನಿಂದ ಟಿಂಬರ್ ವಗ್ಯೆರೆ ತರುವುದಕ್ಕೆ ಅವಕಾಶವಿದೆ. ಅವರು ತಮ್ಮ ಕಾಲ ಮೇಲೆ ನಿಂತು ಮಾಡುವುದಾದರೆ ಕೋ ಆಪರೇಟಿವ್ ಫಾರ್ಮಿಂಗ್ ಜಯಪ್ರದವಾಗುತ್ತದೆ.

Sri V. M. MASCARENHAS (Bangalore Retroceded Area—General).—In view of the tendency of the Government to have a classless society in future, is it desirable to have this kind of segregation and colonies for Depressed Classes?

Sri T. MARIAPPA.—Government will never encourage any segregation.

Sri M. GOVINDA REDDY (Chitaldrug District—General).—How many agricultural colonies are there in the State?

Sri T. MARIAPPA.—That question does not arise.

Sri M. GOVINDA REDDY.—In the answer it is stated that Government have sanctioned the starting of agricultural colonies on co-operative lines. Are there any such colonies functioning now?

Sri T. MARIAPPA.— Not yet.

Sri M. GOVINDA REDDY.— Have the Government made any plans to start agricultural colonies on co-operative lines?

Sri T. MARIAPPA.—Yes. Very recently a scheme of co-operative farming has been sanctioned. Details of that scheme are being worked out. Government intend to start one co-operative farm in each district. To begin with, we intend to start four co-operative farms in four districts.

Sri M. GOVINDA REDDY.—Without the spots being selected?

Sri T. MARIAPPA.—It is left to the Food Production Commissioner and the Rural Development Commissioner to select the places. But in Bangalore, there is Mulbagal Valley and in Mysore District near Hunsur there is Uddur Kaval; in Tumkur we have asked the Deputy Commissioner to select some suitable place.

Sri M. GOVINDA REDDY.—Have the Government prepared any plans?

Sri T. MARIAPPA.—The main details have been settled and we have asked the authorities concerned to give detailed proposals with regard to the area, the number of houses, cost, etc.

Sri M. GOVINDA REDDY.—Have the Government provided separate establishment for running these colonies?

Sri T. MARIAPPA.—In fact we want to give them a skeleton staff to help those colonies. It will not be run entirely by the Government, at the expense of the Government.

Sri M. GOVINDA REDDY.—Have the Government ascertained public opinion in this regard?

Sri T. MARIAPPA.—Public opinion has been in favour of co-operative farming societies. On many an occasion both in this House and in the Representative Assembly members were insisting that co-operative farming societies should be formed.

Sri M. GOVINDA REDDY.—Have the people confidence that the Government will support that scheme?

Sri T. MARIAPPA.—Certainly; this has to be done at any rate, and if there is any apathy on the part of the people, we must try to convert them to this way of thinking.

National Highways in Mysore.

*Q.—82. Sri M. V. KRISHNAPPA (Kolar District—General)—

Will the Government be pleased to state:—

(a) the number of miles of road that come under "National Highways" Mysore State;

(b) which those roads are;

(c) whether these roads are handed over to the charge of the Central Government?

A.—Sri T. MARIAPPA (Home Minister)—

(a) Nil.

(b) and (c) These questions do not arise in view of answer to question (a).

ಶ್ರೀ ಎಂ. ವಿ. ಕೃಷ್ಣಪ್ಪನವರು.—'The number of miles of road that come under National Highways in the State' ಎಷ್ಟು ಎಂದು ಕೇಳಿರುವುದಕ್ಕೆ 'Nil' ಎಂದು ಉತ್ತರ ಕೊಡಲಾಗಿದೆ. ಅಂದರೆ ನಮ್ಮ ಸಂಸ್ಥಾನದಲ್ಲಿ ಇಲ್ಲವೇ ಇಲ್ಲವೆ?

*ಶ್ರೀ ಟಿ. ಮರಿಯಪ್ಪನವರು.—ನಮ್ಮಲ್ಲಿ National Highways ಎಂದಿಲ್ಲ, ಸ್ಟೇಟ್ ಫಂಡ್ ರೋಡ್ಸ್ ಎಂದಿವೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ನಮಗೆ ಕೊಟ್ಟಿರುವ Memorandum on Federal Financial Integration ನಲ್ಲಿ 330 ಮೈಲಿ ಉದ್ದದಷ್ಟು ನ್ಯಾಷನಲ್ ಹೈವೇಸ್ ಇದೆ ಎಂದು ನಮೂದಾಗಿರುವುದರಿಂದ ನಾನು ಈ ಪ್ರಶ್ನೆ ಹಾಕಿದೆ. ಅವರು ಇದನ್ನು ನ್ಯಾಷನಲ್ ಹೈವೇಸ್ ಎಂದು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ದಯವಿಟ್ಟು ಇದನ್ನು ನ್ಯಾಷನಲ್ ಹೈವೇಸ್ ಎಂದು ಸೇರಿಸಿಕೊಳ್ಳುವುದನ್ನು ತಪ್ಪಿಸಬೇಕು. ನಮ್ಮ ರಸ್ತೆಗಳನ್ನು ನಾವೇ ನೋಡಿಕೊಳ್ಳುತ್ತೇವೆ ಎಂದು ನಾವೇ ಕೇಳಿದೆವು.